ವಿಷಯಾನುಕ್ರಮಣಿಕೆ

ಶ್ರೀಶಂಕರಾಚಾರ್ಯರವರ ಗ್ರಂಥಗಳು

# ಪ್ರಕರಣಗಳು

ಸಂಪುಟ ೨

(ಸ್ವಾತ್ಮನಿರೂಪಣ, ಮನೀಷಾಪಂಚಕ, ನಿರ್ವಾಣಷಟ್ಕ,
ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ)

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ – ೫೭೩ ೨೧೧
೨೦೦೨
ದೂರವಾಣಿ: ೦೮೧೭೫–೭ ೩೮೨೦

ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

ಶ್ರೀಶಂಕರಾಚಾರ್ಯವಿರಚಿತ

# ಮನೀಷಾಪಂಚಕ

ಸಂಸ್ಕೃತಮೂಲ, ಅನುವಾದ, ಟಿಪ್ಪಣಿ – ಮುಂತಾದವುಗಳೊಡನೆ

ಬರೆದವರು :
**ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ ೨೪

ಪ್ರಕಾಶಕರು :
**ಅಧ್ಯಾತ್ಮಪ್ರಕಾಶಕಾರ್ಯಾಲಯ**
(ಪಬ್ಲಿಕ್ ಛಾರಿಟಬಲ್ ಟ್ರಸ್ಟ್)
ಹೊಳೆನರಸೀಪುರ
೨೦೦೨

ಮೊದಲನೆಯ ಸಂಸ್ಕರಣ ೧೯೫೬
ಎರಡನೆಯ ಮುದ್ರಣ ೨೦೦೨

© ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
**All Rights Reserved**

ಅಕ್ಷರಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ಸಂ. ೪೫, ೩ನೇ ಮುಖ್ಯರಸ್ತೆ, ನಾಗಸಂದ್ರ,
ತ್ಯಾಗರಾಜನಗರ ಅಂಚೆ, ಬೆಂಗಳೂರು – ೫೬೦ ೦೨೮
✆ ೬೭೬೪೬೫೦

ಮುದ್ರಣಸ್ಥಾನ :
**ಸ್ಟಾಂಡರ್ಡ್ ಪ್ರಿಂಟರ್ಸ್**
ಶಂಕರ ಮಠದ ರಸ್ತೆ, ಶಂಕರ ಪುರಂ
ಬೆಂಗಳೂರು – ೫೬೦ ೦೦೪
✆ ೬೫೨೧೫೨೭

# ಪೀಠಿಕೆ

ಶ್ರೀಶಂಕರಭಗವತ್ಪಾದರವರ ಹೆಸರಿನಲ್ಲಿ ಪ್ರಸಿದ್ಧವಾಗಿ ಜನಾನುರಾಗಕ್ಕೆ ಪಾತ್ರವಾಗಿರುವ ಹಲವು ಪ್ರಕರಣಗಳಲ್ಲಿ ಇದು ಒಂದು. ಇದು ಯಾವಾಗ ಯಾರಿಂದ ರಚಿತವಾಯಿತೆಂದು ಹೇಳುವದು ಕಷ್ಟ. ಆದರೆ ಗೀತಾತಾತ್ಪರ್ಯವೇ ಮುಂತಾದ ಗ್ರಂಥಗಳನ್ನು ಬರೆದಿರುವ ಶ್ರೀಶಂಕರಾನಂದರವರ ಕಾಲಕ್ಕೆ ಇದು ಪ್ರಸಿದ್ಧವಾಗಿದ್ದಿರಬೇಕೆಂಬುದಕ್ಕೆ ಕೆಲವು ಆಧಾರಗಳು ಸಿಕ್ಕುತ್ತವೆ. ಈ ಪ್ರಕರಣದಲ್ಲಿ ಪ್ರಯುಕ್ತವಾಗಿರುವ ಕೆಲವು ಶಬ್ದಗಳನ್ನು ಅವರು ಧಾರಾಳವಾಗಿ ಪ್ರಯೋಗಿಸಿರುತ್ತಾರೆ.

ಗ್ರಂಥವು ಪ್ರಸ್ಥಾನತ್ರಯಭಾಷ್ಯಕಾರರಾದ ಆಚಾರ್ಯರದ್ದಾಗಿರಲಾರದೆನ್ನುವದಕ್ಕೆ ಕೆಲವು ಆಂತರಿಕಪ್ರಮಾಣಗಳು ಸಿಕ್ಕುತ್ತವೆ. ಕೆಲವು ಶಬ್ದಗಳನ್ನು ಈ ಗ್ರಂಥದಲ್ಲಿ ಪ್ರಯೋಗಿಸಿರುವ ಅರ್ಥಗಳಲ್ಲಿ ಪ್ರಚುರವಾಗಿ ಪ್ರಯೋಗಿಸಿರುವದು ಭಾಷ್ಯಗಳಲ್ಲಿ ಕಾಣಬರುವದಿಲ್ಲ. 'ತ್ರಿಗುಣಾ ಅವಿದ್ಯಾ' ಎಂಬ ಪ್ರಯೋಗವು ಭಾಷ್ಯವಲ್ಲಿ ಎಲ್ಲಿಯೂ ಇಲ್ಲ; ಹೀಗೆ ಅವಿದ್ಯೆಯನ್ನೂ ತ್ರಿಗುಣಾತ್ಮಕವಾದ ಮಾಯೆಯನ್ನೂ ಒಂದಾಗಿ ಭಾಷ್ಯದಲ್ಲಿ ಎಣಿಸಿಯೇ ಇಲ್ಲ.

ಇಲ್ಲಿ ಕೊಟ್ಟಿರುವ ಮೊದಲನೆಯ ನಾಲ್ಕು ಅವತರಣಿಕೆಯ ಶ್ಲೋಕಗಳನ್ನು ವಾಣೀವಿಲಾಸಮುದ್ರಣಾಲಯದಲ್ಲಿ ಅಚ್ಚಾಗಿರುವ ಪುಸ್ತಕದಲ್ಲಿ ಸೇರಿಸಿಲ್ಲ. ಅವುಗಳನ್ನು ನೋಡಿದರೆ ಈ ಭಾಗವು ಯಾವದೋ ಒಂದು ಶಂಕರವಿಜಯದಿಂದ ಆರಿಸಿಕೊಂಡದ್ದಾಗಿರಬೇಕೆಂದು ತೋರುತ್ತಿದೆ.

ಗ್ರಂಥವು ಯಾರಿಂದಲೇ ರಚಿತವಾಗಿರಲಿ ಇದರಲ್ಲಿ ಪ್ರತಿಪಾದಿತವಾಗಿರುವ ವಿಷಯವು ವೇದಾಂತಜಿಜ್ಞಾಸುಗಳಿಗೆ ಪ್ರಯೋಜನಕರವೆಂಬುದರಲ್ಲಿ ಸಂಶಯವಿಲ್ಲ. ಆಚಾರ್ಯರದ್ದೇ ಎಂದು ಜನರು ಪರಿಗಣಿಸುವಷ್ಟು ಉಚ್ಚತರಗತಿಯ ಈ ಪುಟ್ಟ ಪ್ರಕರಣವನ್ನು ಶಾಂಕರಗ್ರಂಥಾವಳಿಯಲ್ಲಿ ಸೇರಿಸಿದ್ದು ತಪ್ಪೆಂದು ವಾಚಕರು ಎಂದಿಗೂ ಭಾವಿಸಲಾರರೆಂಬ ನಂಬಿಕೆಯು ನನಗ ಉಂಟು.

ಅನುವಾದಕ.

———

# ವಿಷಯಾನುಕ್ರಮಣಿಕೆ

ಪುಟ

ಅವತರಣಿಕೆ : ಶಂಕರಾಚಾರ್ಯರಿಗೆ ಚಂಡಾಲವೇಷದ ಶಿವನ ದರ್ಶನ ೫

ಶಿವನ ಪ್ರಶ್ನೆ : ಚೈತನ್ಯವನ್ನು ದೂರವಾಗಿಡಲು ಆದೀತೆ ? ೫

ಚೈತನ್ಯದಲ್ಲಿ ವಿಪ್ರ–ಚಾಂಡಾಲ–ಭೇದವಿದೆಯೆ ? ೬

ಮನೀಷಾಪಂಚಕ ಅಥವಾ ಐದು ಅಭಿಪ್ರಾಯಗಳು : ಸಾಕ್ಷಿಚೈತನ್ಯವೇ ತಾನೆಂದು ತಿಳಿದವನೇ ಗುರು ೬

ಬ್ರಹ್ಮದಲ್ಲಿಯೇ ಜಗತ್ತೆಲ್ಲವೂ ಅಧ್ಯಸ್ತವೆಂದು ತಿಳಿದವನೇ ಗುರು
ಜ್ಞಾನಿಯು ಕರ್ಮಬಂಧರಹಿತನು ೭

ಜ್ಞಾನಿಯು ಮನಇಂದ್ರಿಯಾದಿಗಳನ್ನು ಬೆಳಗುವ ಚೈತನ್ಯವನ್ನೇ ಭಾವಿಸುತ್ತಿರುವನು ೮

ನಿತ್ಯಾನಂದಬ್ರಹ್ಮಸ್ವರೂಪವನ್ನು ಪಡೆದ ಜ್ಞಾನಿಯು ಸರ್ವಪೂಜ್ಯನು ೯

॥ ಓಮ್ ॥

# ಮನೀಷಾಪಞ್ಚಕಮ್

## ಅವತರಣಿಕೆ

### ಶಂಕರಾಚಾರ್ಯರಿಗೆ ಚಂಡಾಲವೇಷದ ಶಿವನ ದರ್ಶನ

(ಮೂಲ)

**ಸತ್ಯಾಚಾರ್ಯಸ್ಯ ಗಮನೇ ಕದಾಚಿನ್ಮುಕ್ತಿದಾಯಕಮ್ ।**
**ಕಾಶೀಕ್ಷೇತ್ರಂ ಪ್ರತಿ ಸಹ ಗೌರ್ಯಾ ಮಾರ್ಗೇ ತು ಶಙ್ಕರಮ್ ॥೧॥**

**ಅನ್ತ್ಯವೇಷಧರಂ ದೃಷ್ಟ್ವಾ ಗಚ್ಛಗಚ್ಛೇತಿ ಚಾಬ್ರವೀತ್ ।**
ಶಙ್ಕರಃ ಸೋಽಪಿ ಚಾಣ್ಡಾಲಸ್ತಂ ಪುನಃ ಪ್ರಾಹ ಶಙ್ಕರಮ್ ॥೨॥

೧–೨. ಆಚಾರ್ಯನಾದ ಶಂಕರನು ಒಮ್ಮೆ ಮುಕ್ತಿದಾಯಕವಾದ ಕಾಶೀಕ್ಷೇತ್ರಕ್ಕೆ ಹೋಗಿರಲು ದಾರಿಯಲ್ಲಿ ಗೌರಿಯೊಡನೆ ಚಂಡಾಲವೇಷವನ್ನು ಧರಿಸಿ ನಡೆಯುತ್ತಿದ್ದ ಶಿವನನ್ನು ಕಂಡು 'ಅತ್ತ ನಡೆ, ನಡೆ !' ಎಂದನು. ಆ ಚಾಂಡಾಲವೇಷಧಾರಿಯಾದ ಶಂಕರನು ಈ ಶಂಕರನನ್ನು ಕುರಿತು ಇಂತೆಂದನು.

### ಶಿವನ ಪ್ರಶ್ನೆ : ಚೈತನ್ಯವನ್ನು ದೂರವಾಗಿಡಲು ಆದೀತೆ ?

(ಮೂಲ)

**ಅನ್ನಮಯಾದನ್ನಮಯಮಥವಾ ಚೈತನ್ಯಮೇವ ಚೈತನ್ಯಾತ್ ।**
**ದ್ವಿಜವರ ದೂರೀಕರ್ತುಂ ವಾಞ್ಛಸಿ ಕಿಂ ಬ್ರೂಹಿ ಗಚ್ಛ ಗಚ್ಛೇತಿ ॥೩॥**

೩. ಎಲೈ ಬ್ರಾಹ್ಮಣಶ್ರೇಷ್ಠನೆ, ಅನ್ನಮಯಶರೀರವನ್ನು ಅನ್ನಮಯ ಶರೀರದಿಂದ ದೂರವಿರಿಸಿಕೊಳ್ಳಲು ಬಯಸುತ್ತಿರುವೆಯೊ, ಅಥವಾ ಚೈತನ್ಯವನ್ನೇ ಚೈತನ್ಯದಿಂದ ದೂರವಿರಿಸುವದಕ್ಕೆ ಬಯಸುತ್ತಿರುವೆಯೊ ? 'ಅತ್ತ ನಡೆ, ಅತ್ತ ನಡೆ !' ಎನ್ನುತ್ತಿರುವೆಯಲ್ಲ' ಯಾವದನ್ನು ? ಅದನ್ನು ಹೇಳು !

## ಚೈತನ್ಯದಲ್ಲಿ ವಿಪ್ರಚಾಂಡಾಲಭೇದವಿದೆಯೆ ?

(ಮೂಲ)

ಕಿಂ ಗಙ್ಗಾಮ್ಬುನಿ ಬಿಮ್ಬಿತೇಽಮ್ಬರಮಣೌ ಚಣ್ಡಾಲವಾಟೀಪಯಃ
ಪೂರೇ ಚಾನ್ತರಮಸ್ತಿ ಕಾಞ್ಚನಘಟೀಮೃತ್ಕುಮ್ಭಯೋರ್ವಾಮ್ಬರೇ ।
ಪ್ರತ್ಯಗ್ವಸ್ತುನಿ ನಿಸ್ತರಙ್ಗಸಹಜಾನನ್ದಾವಬೋಧಾಮ್ಬುಧೌ
ವಿಪ್ರೋಽಯಂ ಶ್ವಪಚೋಽಯಮಿತ್ಯಪಿ ಮಹಾನ್ ಕೋಽಯಂ
ವಿಭೇದಭ್ರಮಃ ॥ ೪ ॥

೪. ಗಂಗೆಯ ನೀರಿನಲ್ಲಿ ಮೂಡಿಕೊಂಡಿರುವ ಸೂರ್ಯನಿಗೂ ಚಂಡಾಲರ ಹಟ್ಟಿಯ ಕಾಲುವೆಯ ನೀರಿನಲ್ಲಿ ಮೂಡಿಕೊಂಡಿರುವ ಸೂರ್ಯನಿಗೂ ತಾರತಮ್ಯವಿದೆಯೇನು ?[1] ಚಿನ್ನದ ಕೊಡ, ಮಣ್ಣಿನ ಗಡಿಗೆ– ಇವುಗಳಲ್ಲಿರುವ ಆಕಾಶದೊಳಗೆ ತಾರತಮ್ಯವುಂಟೇನು?[2] ಅಲೆಯಿಲ್ಲದ ಸಹಜಾನಂದದ ಸಾಗರ ವಾಗಿರುವ ಪ್ರತ್ಯಗಾತ್ಮವಸ್ತುವಿನಲ್ಲಿ ಇವನು ವಿಪ್ರನು, ಇವನು ಹೊಲೆಯನು – ಎಂದು ಭೇದವನ್ನು ಕಾಣುವ ಈ ಮಹಾಭ್ರಾಂತಿಯು ಎಂಥದ್ದು ?

## ಮನೀಷಾಪಂಚಕ ಅಥವಾ ಐದು ಅಭಿಪ್ರಾಯಗಳು

### ಸಾಕ್ಷಿಚೈತನ್ಯವೇ ತಾನೆಂದು ತಿಳಿದವನೇ ಗುರು

(ಮೂಲ)

ಜಾಗ್ರತ್ಸ್ವಪ್ನಸುಷುಪ್ತಿಷು ಸ್ಫುಟತರಾ ಯಾ ಸಂವಿದುಜ್ಜೃಮ್ಭತೇ ।
ಯಾ ಬ್ರಹ್ಮಾದಿಪಿಪೀಲಿಕಾನ್ತತನುಷು ಪ್ರೋತಾ ಜಗತ್ಸಾಕ್ಷಿಣೀ ।
ಸೈವಾಽಹಂ ನ ಚ ದೃಶ್ಯವಸ್ತ್ವಿತಿ ದೃಢಪ್ರಜ್ಞಾಽಪಿ ಯಸ್ಯಾಽಸ್ತಿ ಚೇತ್
ಚಾಣ್ಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ ॥೫॥

೫. ಎಚ್ಚರಕನಸುತನಿನಿದ್ರೆಗಳಲ್ಲಿ ಸ್ಫುಟತರವಾಗಿ ಯಾವ ಚೈತನ್ಯವು ಹರಡಿಕೊಂಡಿರುವದೋ, ಯಾವದು ಬ್ರಹ್ಮವೇ ಮೊದಲಾಗಿ ಇರುವೆಯವರೆಗಿನ

1. ಪ್ರತಿಬಿಂಬಗಳು ಬೇರೆಬೇರೆಯಾದರೂ ಬಿಂಬವಾದ ಸೂರ್ಯನು ಒಬ್ಬನೇ ಅಲ್ಲವೆ ?– ಎಂದು ಭಾವ.

2. ಉಪಾಧಿಗಳಾದ ಕೊಡ, ಗಡಿಗೆ– ಇವುಗಳೊಳಗೆ ತಾರತಮ್ಯವಿರಬಹುದು ; ಅವುಗಳಿಂದ ಬಿಡಿಬಿಡಿಯಾಗಿ ತೋರುವ ಆಕಾಶದಲ್ಲಿ ಯಾವ ತಾರತಮ್ಯವೂ ಇರಲಾರದು – ಎಂದು ಭಾವ.

ಪ್ರಾಣಿಗಳ ಶರೀರಗಳಲ್ಲಿ ಪೋಣಿಸಿಕೊಂಡಿರುವ ಜಗತ್ಸಾಕ್ಷಿಯಾಗಿರುವದೋ[1] ಆ ಅರಿವೇ ನಾನು, ದೃಶ್ಯವಸ್ತುವಲ್ಲ – ಎಂಬ ಗಟ್ಟಿಯಾದ ತಿಳಿವಳಿಕೆಯು ಯಾವನಿಗೇ ಇದ್ದುಕೊಂಡಿರಲಿ, ಹೊಲೆಯನಾಗಿರಲಿ ದ್ವಿಜನಾಗಿರಲಿ, ಅವನೇ ಗುರುವು ಎಂಬುದು ನನ್ನ ಮತವು.

## ಬ್ರಹ್ಮದಲ್ಲಿಯೇ ಜಗತ್ತೆಲ್ಲವೂ ಅಧ್ಯಸ್ತವೆಂದು ತಿಳಿದವನೇ ಗುರು

(ಮೂಲ)

**ಬ್ರಹ್ಮೈವಾಽಹಮಿದಂ ಜಗಚ್ಚ ಸಕಲಂ ಚಿನ್ಮಾತ್ರವಿಸ್ತಾರಿತಂ**
**ಸರ್ವಂ ಚೈತದವಿದ್ಯಯಾ ತ್ರಿಗುಣಯಾಽಶೇಷಂ ಮಯಾ ಕಲ್ಪಿತಮ್ ।**
**ಇತ್ಥಂ ಯಸ್ಯ ದೃಢಾ ಮತಿಃ ಸುಖತರೇ ನಿತ್ಯೇ ಪರೇ ನಿರ್ಮಲೇ ।**
**ಚಾಣ್ಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ ॥೬॥**

೬. ನಾನೂ ಈ ಜಗತ್ತೂ ಬ್ರಹ್ಮವೇ ; ಎಲ್ಲವೂ ಬರಿಯ ಚೈತನ್ಯದ ಹರಡಿಕೆಯೇ, ಇದೆಲ್ಲವೂ ತ್ರಿಗುಣಾತ್ಮಕವಾದ ಅವಿದ್ಯೆಯಿಂದ[2] ನಾನು ಕಲ್ಪಿಸಿಕೊಂಡಿರುವದೇ[3]. ಹೀಗೆಂದು ಸುಖತರವಾಗಿಯೂ ನಿತ್ಯವಾಗಿಯೂ ಸರ್ವೋತ್ಕೃಷ್ಟವಾಗಿಯೂ ನಿರ್ಮಲವಾಗಿಯೂ ಯಾವನಿಗೆ ಗಟ್ಟಿಯಾದ ತಿಳಿವು ಇದ್ದುಕೊಂಡಿರುವದೋ, ಹೊಲೆಯನಾಗಿರಲಿ ದ್ವಿಜನಾಗಿರಲಿ, ಅವನೇ ಗುರುವು ಎಂಬುದು ನನ್ನ ಮತವು.

## ಜ್ಞಾನಿಯು ಕರ್ಮಬಂಧರಹಿತನು

(ಮೂಲ)

**ಶಶ್ವನ್ನಶ್ವರಮೇವ ವಿಶ್ವಮಖಿಲಂ ನಿಶ್ಚಿತ್ಯ ವಾಚಾ ಗುರೋ–**
**ರ್ನಿತ್ಯಂ ಬ್ರಹ್ಮ ನಿರನ್ತರಂ ವಿಮೃಶತಾ ನಿರ್ವ್ಯಾಜಶಾನ್ತಾತ್ಮನಾ ।**

---

1. ಹಿಂದಿನ ವಾಕ್ಯದಲ್ಲಿ ಒಬ್ಬೊಬ್ಬನಿಗೂ ಜಾಗ್ರದಾದ್ಯವಸ್ಥೆಗಳಲ್ಲಿ ಒಬ್ಬನೇ ಸಾಕ್ಷಿ ಎಂಬಿದೆ ; ಈ ಎರಡನೆಯ ವಾಕ್ಯದಲ್ಲಿ ಎಚ್ಚರದ ದೃಷ್ಟಿಯಿಂದ ಕಾಣುವ ಸಕಲಪ್ರಾಣಿಗಳಿಗೂ ಒಬ್ಬ ಆತ್ಮನೇ ಸಾಕ್ಷಿ ಎಂದಿದೆ. 2. ಮಾಯೆಯಿಂದ ಎಂದರ್ಥ ; ಪೀಠಿಕೆಯನ್ನು ನೋಡಿ.

3. ಅಧ್ಯಾರೋಪದಿಂದ ನನಗೆ ಕಾಣಿಸುತ್ತಿರುವದೇ ಎಂದರ್ಥ.

ಭೂತಂ ಭಾವಿ ಚ ದುಷ್ಕೃತಂ ಪ್ರದಹತಾ ಸಂವಿನ್ಮಯೇ ಪಾವಕೇ
ಪ್ರಾರಬ್ಧಾಯ ಸಮರ್ಪಿತಂ ಸ್ವವಪುರಿತ್ಯೇಷಾ ಮನೀಷಾ ಮಮ ॥೭॥

೭. ಈ ಪ್ರಪಂಚವೆಲ್ಲವೂ ಅನಿತ್ಯವೇ ಎಂದು ಗುರುವಾಕ್ಯದಿಂದ ನಿಶ್ಚಯಿಸಿ, ನಿಷ್ಕಾರಣವಾಗಿ ಶಾಂತವಾಗಿರುವ ಅಂತಃಕರಣದಿಂದ ಬ್ರಹ್ಮವನ್ನೇ ನಿತ್ಯವೂ ವಿಮರ್ಶಿಸುತ್ತಿರುವ ಜ್ಞಾನಿಯು, ಹಿಂದಿನ ಮುಂದಿನ ದುಷ್ಕೃತಗಳನ್ನು[1] ಚಿನ್ಮಯವಾದ ಅಗ್ನಿಯಲ್ಲಿ ಸುಟ್ಟುಹಾಕಿ ತನ್ನ ಶರೀರವನ್ನು ಪ್ರಾರಬ್ಧಕ್ಕೆ ಒಪ್ಪಿಸಿರುವನೆಂಬುದು ನನ್ನ ಮತವು.

## ಜ್ಞಾನಿಯು ಮನಇಂದ್ರಿಯಾದಿಗಳನ್ನು ಬೆಳಗುವ ಚೈತನ್ಯವನ್ನೇ ಭಾವಿಸುತ್ತಿರುವನು

(ಮೂಲ)

ಯಾ ತಿರ್ಯಙ್ನರದೇವತಾಭಿರಹಮಿತ್ಯನ್ತಃ ಸ್ಫುಟಾ ಗೃಹ್ಯತೇ
ಯದ್ಭಾಸಾ ಹೃದಯಾಕ್ಷದೇಹವಿಷಯಾ ಭಾನ್ತಿ ಸ್ವತೋಽಚೇತನಾಃ ।
ತಾಂ ಭಾಸ್ಯೈಃ ಪಿಹಿತಾರ್ಕಮಣ್ಡಲನಿಭಾಂ ಸ್ಫೂರ್ತಿಂ ಸದಾ ಭಾವಯನ್
ಯೋಗೀ ನಿರ್ವೃತಮಾನಸೋ ಹಿ ಗುರುರಿತ್ಯೇಷಾ ಮನೀಷಾ ಮಮ ॥೮॥

೮. ಯಾವ ಚೈತನ್ಯಪ್ರಕಾಶವನ್ನು ತಿರ್ಯಗ್ಜಂತುಗಳು, ಮನುಷ್ಯರು, ದೇವತೆಗಳು – ಎಲ್ಲರೂ 'ನಾನು' ಎಂದು ಸ್ಫುಟವಾಗಿ ಗ್ರಹಿಸಿಕೊಳ್ಳುತ್ತಿರುವರೋ,[2] ಮನಸ್ಸು, ಇಂದ್ರಿಯಗಳು, ದೇಹ, ವಿಷಯಗಳು – ಇವು ತಾವುತಾವು ಅಚೇತನವಾಗಿದ್ದುಕೊಂಡಿದ್ದರೂ ಯಾವದರ ಬೆಳಕಿನಿಂದ ಬೆಳಗುತ್ತಿರುವವೋ,[3] ಭಾಸ್ಯವಾದ (ಮೋಡವೇ ಮುಂತಾದ) ವಸ್ತುಗಳಿಂದ ಮರೆಯಾಗಿರುವ ಸೂರ್ಯಮಂಡಲದಂತೆ[4] ಇರುವ ಆ ಚೈತನ್ಯಪ್ರಕಾಶವನ್ನು ಯಾವಾಗಲೂ ಭಾವಿಸಿ

---

1. ಪುಣ್ಯಪಾಪಗಳನ್ನು. 2. ಯಾವದು ಸರ್ವರಿಗೂ ಆತ್ಮನಾಗಿರುವದೋ ಎಂದರ್ಥ.

3. ಆದರೂ ಅವೇ ಬೆಳಗುತ್ತಿರುವವೆಂದು ಯಾವದನ್ನು ಮೂಢರು ತಿಳಿದುಕೊಂಡಿರುವರೋ ಎಂದರ್ಥ.

4. ನಿಜವಾಗಿ ಸೂರ್ಯಮಂಡಲವು ತಾನೂ ಬೆಳಗುತ್ತಿದ್ದು ಮೋಡವೇ ಮುಂತಾದವುಗಳನ್ನು ಬೆಳಗುತ್ತಿರುವಂತೆ ಸಾಕ್ಷಿಚೈತನ್ಯವು ತಾನೂ ಬೆಳಗುತ್ತಿದ್ದು ಮನಆದಿಗಳನ್ನೂ ಬೆಳಗುತ್ತಿರುತ್ತದೆ ಎಂದು ಭಾವ.

ಕೊಳ್ಳುತ್ತಾ ಮನಸ್ಸಿನಲ್ಲಿ ಆನಂದದಿಂದ ಇರುತ್ತಿರುವ ಜ್ಞಾನಯೋಗಿಯೇ ಗುರುವು ಎಂಬಿದು ನನ್ನ ಮತವು.

## ನಿತ್ಯಾನಂದಬ್ರಹ್ಮಸ್ವರೂಪವನ್ನು ಪಡೆದ ಜ್ಞಾನಿಯು ಸರ್ವಪೂಜ್ಯನು

(ಮೂಲ)

ಯತ್ಸೌಖ್ಯಾಮ್ಬುಧಿಲೇಶಲೇಶತ ಇಮೇ ಶಕ್ರಾದಯೋ ನಿರ್ವೃತಾಃ
ಯಚ್ಚಿತ್ತೇ ನಿತರಾಂ ಪ್ರಶಾನ್ತಕಲನೇ ಲಬ್ಧ್ವಾ ಮುನಿರ್ನಿರ್ವೃತಃ ।
ಯಸ್ಮಿನ್ನಿತ್ಯಸುಖಾಮ್ಬುಧೌ ಗಲಿತಧೀರ್ಬ್ರಹ್ಮೈವ ನ ಬ್ರಹ್ಮವಿದ್
ಯಃ ಕಶ್ಚಿತ್ಸ ಸುರೇನ್ದ್ರವನ್ದಿತಪದೋ ನೂನಂ ಮನೀಷಾ ಮಮ ॥೯॥

೯. ಯಾವ ಆನಂದಲೇಶದ ಲೇಶದಿಂದ ಈ ಇಂದ್ರಾದಿಗಳೂ ಸುಖಿಗಳೆನಿಸಿರುವರೋ[1], ಸಂಪೂರ್ಣವಾಗಿ ಕಲ್ಪನೆಗಳೆಲ್ಲ ಅಡಗಿ ಹೋಗಿರುವ ಚಿತ್ತದಲ್ಲಿ[2] ಯಾವದನ್ನು ಪಡೆದುಕೊಂಡ ಮುನಿಯು ಸುಖಿಯಾಗಿರುವನೋ ನಿತ್ಯವಾದ ಯಾವ ಆನಂದಸಾಗರದಲ್ಲಿ ಅಂತಃಕರಣವನ್ನು ಲಯಗೊಳಿಸಿ ಕೊಂಡವನು ಬರಿಯ ಬ್ರಹ್ಮವೇತ್ತನಲ್ಲ, ಬ್ರಹ್ಮವೇ ಆಗಿರುವನೋ[3] ಅಂಥವನು ಯಾವನೇ ಆಗಿರಲಿ, ಅವನು ನಿಜವಾಗಿ ದೇವೇಂದ್ರನಿಗೂ ನಮಸ್ಕಾರ್ಯವಾದ ಪಾದಗಳುಳ್ಳವನು– ಎಂಬುದು ನನ್ನ ಮತವು.

ಓಂ ತತ್ಸತ್

-----

1. ಬೃ. ೪–೩–೩೨, ೩೩ ಮತ್ತು ತೈ. ೨–೮– ಇವುಗಳ ಅಭಿಪ್ರಾಯ.

2. ಮನಸ್ಸನ್ನು ಆತ್ಮನಲ್ಲಿಯೇ ಲಯಮಾಡಿಕೊಂಡಿರುವ ಸ್ಥಿತಿಯಲ್ಲಿ.

3. ಮುಂ. ೩–೨–೯.

# ಶ್ಲೋಕಾನುಕ್ರಮಣಿಕೆ


| ಪ್ರತೀಕಗಳು | ಶ್ಲೋಕ ಸಂಖ್ಯೆ |
|---|---|
| ಅನ್ಯವೇಷಧರಂ ದೃಷ್ಟ್ವಾ | ೨ |
| ಅನ್ನಮಯಾದನ್ನಮಯಮ್ | ೩ |
| ಕಿಂ ಗಙ್ಗಾಮ್ಬುನಿ ಬಿಮ್ಬಿತೇ | ೪ |
| ಜಾಗ್ರತ್ಸ್ವಪ್ನಸುಷುಪ್ತಿಷು ಸ್ಫುಟತರಾ | ೫ |
| ಬ್ರಹ್ಮೈವಾಹಮಿದಂ ಜಗಚ್ಚ | ೬ |
| ಯತ್ಸೌಖ್ಯಾಮ್ಬುಧಿಲೇಶಲೇಶತ | ೭ |
| ಯಾ ತಿರ್ಯಙ್ನರದೇವತಾಭಿಃ | ೮ |
| ಶಶ್ವನ್ನಶ್ವರಮೇವ ವಿಶ್ವಮಖಿಲಂ | ೯ |
| ಸತ್ಯಾಚಾರ್ಯಸ್ಯ ಗಮನೇ | ೧ |


------

# ಶಬ್ದಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಶ್ಲೋಕವನ್ನು ಪರಮಾರ್ಶಿಸುವವು. *ನಕ್ಷತ್ರ ಚಿಹ್ನೆಯು ಈ ಅರ್ಥದಲ್ಲಿ ಶಬ್ದವು ಭಾಷ್ಯದಲ್ಲಿ ಅಷ್ಟು ಪ್ರಚುರವಾಗಿ ಕಾಣುವದಿಲ್ಲ ವೆಂಬುದನ್ನು ತಿಳಿಸುವದು.


೧. *ಅನ್ನಮಯಃ–
ಅನ್ನದಿಂದಾಗಿರುವ ಶರೀರ, ೩.

೨. ಅಹಮ್–
ನಾನು ಎಂಬ ಪ್ರತ್ಯಯಕ್ಕೆ ಲಕ್ಷ್ಯವಾಗಿರುವ ಸಾಕ್ಷಿರೂಪನಾದ ಆತ್ಮ ೮.

೩. *ಗಲಿತಧೀಃ–
ಅಡಗಿಹೋದ ಅಂತಃಕರಣವುಳ್ಳವನು, ಆತ್ಮಾಕಾರವಾದ ಚಿತ್ತವುಳ್ಳವನು, ೯.

೪. *ಚಿನ್ಮಾತ್ರವಿಸ್ತಾರಿತಮ್–
ಬರಿಯ ಚೈತನ್ಯದಿಂದ ಹೊರಟುಬಂದು ಹರಡಿಕೊಂಡಿರುವದು, ೬.

೫. *ತ್ರಿಗುಣಾ ಅವಿದ್ಯಾ–
ಸತ್ತ್ವಾದಿಗುಣತ್ರಯಗಳಿಂದಾಗಿರುವ ಮಾಯೆ, ೬.

೬. ದುಷ್ಕೃತಮ್–
ಪಾಪಪುಣ್ಯಗಳು, ೭.

೭. *ಪಿಹಿತಾರ್ಕಮಣ್ಡಲಮ್–
ತಾನು ಬೆಳಗುವ ಮೋಡವೇ ಮುಂತಾದವುಗಳಿಂದ ಮುಚ್ಚಿದಂತಿರುವ ಸೂರ್ಯಮಂಡಲ, ೮.

೮. ಪ್ರಶಾನ್ತಕಲನಂ ಚಿತ್ತಮ್–
ಯಾವ ವೃತ್ತಿಯೂ ಎದ್ದುಕೊಳ್ಳದ ಚಿತ್ತ, ೯

೯. * ಪ್ರತ್ಯಗ್ವಸ್ತು–
ಒಳಗಿರುವ ಆತ್ಮವಸ್ತು, ೪.

೧೦. *ಪ್ರಾರಬ್ಧಮ್–
ಫಲವನ್ನುಂಟುಮಾಡಿಬಿಟ್ಟಿರುವ ಕರ್ಮ, ೭.

೧೧. * ಯೋಗೀ–
ಯಾವಾಗಲೂ ಚಿತ್ತ್ರಕಾಶವನ್ನು ಅನುಸಂಧಾನಮಾಡಿಕೊಂಡಿರುವ ಜ್ಞಾನಿ, ೮.

೧೨. *ಸಂವಿತ್–
ಚಿತ್ಸ್ವರೂಪ, ೫.